**E**nvironmental **S**ocial *Justice* & **G**overnance Initiatives
*Organization in Special Consultative Status with the Economic and Social Council since 2011*

1572, 36th Cross, 100 Feet Ring Road,
Banashankari II Stage,
Bangalore 560070. INDIA
Tel: 91-80-26713559-3561
Voice/Fax: 91-80-26713316
Email: esg@esgindia.org
Web: www.esgindia.org

**ದಿನಾಂಕ:19.12.2015**

# ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಮತ್ತು ಪರಿಸರ ಬೆಂಬಲ ತಂಡದ ವತಿಯಿಂದ ಸೆಂಟ್ ಫಿಲೋಮಿನಾಸ್ ಕಾಲೇಜು, ಮೈಸೂರು ಇವರುಗಳ ಸಹಯೋಗದೊಂದಿಗೆ "ಕೆರೆಗಳ ಮತ್ತು ನೀರಿನ ಮೂಲಗಳ ಸಂರಕ್ಷಣೆ" ಕಾರ್ಯಾಗಾರದ ಅಮಂತ್ರಣ ಪತ್ರಿಕೆ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ಇವರ ಸಹಯೋಗದೊಂದಿಗೆ ನೀರು, ನೈರ್ಮಲ್ಯ ಮತ್ತು ಶುಚಿತ್ವ(ವಾಷ್)ಗಳ ಸಮೂಹ ಪ್ರಯತ್ನಗಳ ಭಾಗವಾಗಿ ಈ ಕಾರ್ಯಾಗಾರವನ್ನು ಪ್ರಾಯೋಜಿಸಲಾಗುತ್ತಿದ್ದು, ಹಾಗೂ ಪರಿಸರ ನೀರಿನ ಸಾಕ್ಷರತಾ ಆಂದೋಲನ 2011 (ಕರ್ನಾಟಕ) ಸಹಾಯದೊಂದಿಗೆ ನಡೆಸಲಾಗುತ್ತಿದೆ.

**ಎಲ್ಲರಿಗೂ ಸುಸ್ವಾಗತ:**
ಈ ಕಾರ್ಯಾಗಾರವು ವಿಶೇಷವಾಗಿ ಪುರಸಭೆ, ನಗರಸಭೆ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಸಂಸ್ಥೆಗಳು, ಸಣ್ಣ ನೀರಾವರಿ ಇಲಾಖೆ, ಅರಣ್ಯ ಇಲಾಖೆ, ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಅಧಿಕಾರಿಗಳು, ಶಿಕ್ಷಕರು, ಮಾಧ್ಯಮದವರನ್ನು, ಸ್ವಯಂ ಸೇವಾ ಕ್ಷೇತ್ರದ ಪ್ರತಿನಿಧಿಗಳೆಲ್ಲರಿಗೂ ಉಪಯೋಗವಾಗಲಿದೆ. ಈ ಕಾರ್ಯಾಗಾರದಲ್ಲಿ ಭಾಗವಹಿಸುವುದಕ್ಕೆ ಸುಸ್ವಾಗತ ಜೊತೆಗೆ ತಮ್ಮ ಮೊದಲ ಹಾಜರಾತಿಯನ್ನು ದೃಡೀಕರಿಸಿ. ಈ ಸರಣಿಯಲ್ಲಿ ಮೈಸೂರಿನ ಕಾರ್ಯಾಗಾರವು ಮೂರನೇ ಕಾರ್ಯಾಗಾರವಾಗಿದ್ದು, ಈ ಕಾರ್ಯಾಗಾರಗಳನ್ನು ಕರ್ನಾಟಕದಾದ್ಯಂತ ಸರಣಿ ರೂಪದಲ್ಲಿ ನಡೆಸಲಾಗುವುದು. ಭಾಗಾರ್ಥಿಗಳಿಗೆ ಮಳೆನೀರು ಸಂಗ್ರಹಣೆ ಮತ್ತು ಕೆರೆ ಸಂರಕ್ಷಣೆಗೆ ಸಂಬಂಧಿಸಿದ ಸಂಪನ್ಮೂಲ ವಸ್ತುಗಳನ್ನು ಒದಗಿಸಲಾಗುವುದು. ನಿಮ್ಮ ಭಾಗವಹಿಸುವಿಕೆಯನ್ನು **ಈ ಕೆಳಗಿನ ವಿಳಾಸಕ್ಕೆ ಈ ಮೇಲ್ ಮಾಡಿ ಅಥವ ದೂರವಾಣಿ ಸಂಖ್ಯೆಗೆ ಕರೆ ಮಾಡಿ pushpa@esgindia.org or call 91-80- 26713559/60 ತಿಳಿಸಿ**

**ಮೈಸೂರಿನಲ್ಲಿ ನಡೆಯುವ ಕಾರ್ಯಾಗಾರದ ದಿನಾಂಕ ಮತ್ತು ಸ್ಥಳ :- 19ನೇ ಮಾರ್ಚ 2015, ಸಮಯ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಘಂಟೆಯವರೆಗೆ, ಸೆಂಟ್.ಫಿಲೋಮಿನಾ ಕಾಲೇಜು, ಬನ್ನಿಮಂಟಪ, ಬೆಂಗಳೂರು ಮೈಸೂರು ರಸ್ತೆ, ಮೈಸೂರು-570015.**

ನಿಮ್ಮ ಸಹೋದ್ಯೋಗಿಗಳು, ಸ್ನೇಹಿತರು ಮತ್ತು ಸಹವರ್ತಿಗಳನ್ನು ಈ ಕಾರ್ಯಾಗಾರದಲ್ಲಿ ಭಾಗವಹಿಸಲು ತಿಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

**ಇದಕ್ಕೆ ಸಂಭಂದಿಸಿದಂತೆ**



| | |
|---|---|
| **A. ,R. Shivakumar**<br>**Senior Fellow**<br>**Karnataka State Council for Science and Technology**<br>Indian Institute of Science Campus,<br>Bangalore – 560012<br>**Tel:** +91-080-2334 1652 /2334 8848 /2334 8849<br>**E-mail**: office@kscst.org.in<br>office@kscst.iisc.ernet.in<br>**Website**:www.kscst.org.in,<br>www.kscst.iisc.ernet.in | **Leo F. Saldanha & Bhargavi S. Rao**<br>**Coordinators/Trustees**<br>**Environment Support Group®**<br>1572, 100 Feet Ring Road,<br>Banashankari II Stage, Bangalore<br>560070<br>**Tel**: 91-80-26713559-3561<br>**Voice/Fax**: 91-80-26713316<br>**Email:** esg@esgindia.org<br>**Web**: www.esgindia.org |




ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.

**ಕಾರ್ಯಕ್ರಮದ ಸಂಕ್ಷಿಪ್ತ ಹಿನ್ನೆಲೆ:**

ನಗರಾಭಿವೃದ್ಧಿ ಹೆಚ್ಚಾದಂತೆ, ನೀರಿಗೆ ಬೇಡಿಕೆಯುಂಟಾಗಿ– ಭೂಮಿಯಲ್ಲಿರುವ ಪರಿಮಿತಿಯುಳ್ಳ ಶುದ್ಧ ನೀರಿನ ಪೂರೈಕೆಯನ್ನು ಪೀಡಿಸಿ ಹೆಚ್ಚಿಸಬೇಕಾಗುತ್ತದೆ, ಇದರ ಜೊತೆಗೆ ಜನಸಂಖ್ಯೆಯ ಹೆಚ್ಚಳ, ಕೃಷಿ, ಮತ್ತು ಕೈಗಾರಿಕೆಯ ತ್ಯಾಜ್ಯ ವಸ್ತುಗಳಿಂದ ನೀರು ಕಲುಶಿತವಾಗುವುದು ಹೆಚ್ಚಾಗುತ್ತಿದೆ. ಇಂದು ಎಷ್ಟೋ ವಾಸಸ್ಥಳಗಳಲ್ಲಿ ನೀರಿನ ಸಂಪನ್ಮೂಲಗಳು ವಿರಳವಾಗಿರುವುದರ ಜೊತೆಗೆ ಸಾಕಷ್ಟು ನೀರಿನ ಪೂರೈಕೆ ಮಾಡದಿರುವುದರಿಂದ ಅಭಿವೃದ್ಧಿಯಲ್ಲಿ ನ್ಯೂನ್ಯತೆಯು ಕಂಡುಬಂದು, ಮೂಲಭೂತ ನೈರ್ಮಲ್ಯ ಸೇವೆಗಳಲ್ಲಿ ತುಂಬ ಹೆಚ್ಚು ನ್ಯೂನ್ಯತೆ ಉಂಟಾಗುತ್ತಿದೆ ಮತ್ತು ಯಾವಾಗಲೂ ಸಂಸ್ಕರಿಸದ ತ್ಯಾಜ್ಯವನ್ನು ಬಯಲಿಗೆ ಹಾಕುವುದು ಅಪಾಯವನ್ನು ತಂದೊಡ್ಡುತ್ತಿದೆ. ಭೂ ಗ್ರಹದಲ್ಲಿನ 3ನೇ 2 ಭಾಗದ ಎಲ್ಲಾ ಜನರು 2025ನೇ ಇಸವಿಗೆ ನೀರಿನ ತೊಂದರೆಯನ್ನು ಅನುಭವಿಸುವುದನ್ನು ಬಿಂಬಿಸುತ್ತದೆ.

ನೂರಾರು ವರ್ಷಗಳ ಹಿಂದೆ ವಿವಿಧ ಪ್ರದೇಶಗಳಾದ್ಯಂತ ಕೆರೆ (ಕುಂಟೆ) ಗಳನ್ನು ಕಟ್ಟಲಾಗಿದೆ. ಇವುಗಳಿಂದ ಮಳೆ ನೀರು ಕೊಯ್ಲು ಮಾಡಲು ಅನುಕೂಲವಾಗುತ್ತಿತ್ತು. ಬೇಸಿಗೆ ಕಾಲದಲ್ಲಿಯೂ ನೀರಿನ ಭದ್ರತೆಯನ್ನು ಕಾಪಾಡಿದಂತಾಗುತ್ತಿತ್ತು. ಜೊತೆಗೆ ಈ ನೀರಾವರಿಯಿಂದ ಕೃಷಿ ಪ್ರದೇಶಗಳಿಗೆ ಅನೂಕೂಲವಾಗುತ್ತಿತ್ತು. ಇದರಿಂದ ಪರಿಸರದಲ್ಲಿ ಅಂತರ್ಜಲ ಮರುಪೂರಣ ಮಾಡುವುದರ ಜೊತೆಗೆ ಫಲವತ್ತಾದ ಪರಿಸರ ಜಾಲದಲ್ಲಿ ವಿಕಸನವಾಗಿ ಪರಿಸರ ನಿರ್ವಹಣೆ,ಸಂರಕ್ಷಣೆ ಮತ್ತು ಮಾನ್ಯತೆಗೆ ಸ್ಥಳೀಯ ಸಂಸ್ಕೃತಿ ಮತ್ತು ಸಂಪ್ರದಾಯದ ಒಂದು ನೈಜ ಭಾಗವಾಗಿದೆ.

ಕರ್ನಾಟಕ ರಾಜ್ಯದಲ್ಲಿ ಒಮ್ಮೆ ಸರಣಿ ಕೆರೆಗಳು, ಕಟ್ಟೆಗಳು ಮತ್ತು ರಾಜಕಾಲುವೆಗಳು (ಕಾಲುವೆಗಳು) ಒಂದು ಬಾರಿ ಮಾತ್ರ ತುಂಬಿವೆ. ಈಗ ಈ ಕೆರೆ ಅಂಗಳ ಮತ್ತು ಕಟ್ಟೆಗಳ ಜಾಗಗಳಲ್ಲಿ ಬಸ್ ನಿಲ್ದಾಣಗಳು, ಕ್ರಿಂಡಾಂಗಣಗಳು, ವಸತಿ ಸಮುಚ್ಚಯಗಳು, ಅಂಗಡಿ ಸಂಕೀರ್ಣಗಳು ಹೆಚ್ಚು, ಹೆಚ್ಚು ಎದ್ದು ನಿಂತಿವೆ. ಅತ್ಯುನ್ನತ ನಗರ ಪ್ರದೇಶಗಳಲ್ಲಿ ಘನತ್ಯಾಜ್ಯಗಳ ತಿಪ್ಪೆಗಳನ್ನು ಸೃಷ್ಟಿ ಮಾಡಲಾಗುತ್ತಿದೆ. ಉಳಿದಿರುವ ಕೈಗಾರಿಕಾ ತ್ಯಾಜ್ಯಗಳು, ಮನೆಯ ಚರಂಡಿ ಮತ್ತು ಅನಿಯಂತ್ರಿತ ವಿಸರ್ಜನೆ ಘಟಕಗಳಾಗಿ ಕಂಗೊಳಿಸುತ್ತಿವೆ. ಅನೇಕ ಕಾಲುವೆಗಳು, ರಾಜಕಾಲುವೆಗಳು ಮತ್ತು ಸರೋವರಗಳಲ್ಲಿ ಹೂಳು ತುಂಬಿರುವುದರಿಂದ ಅಂತರ್ಜಲ ಮರುಪೂರಣ ಸಾದ್ಯವಿಲ್ಲ. ಅನೇಕ ಸಾವಿರಾರು ಕೆರೆ, ಕುಂಟೆಗಳಲ್ಲಿ ನೀರಿನ ಅಭದ್ರತೆ ಹೆಚ್ಚಿ, ಲಕ್ಷ,ಲಕ್ಷ ಜನರ ಸಂಕಷ್ಟಗಳ ಪರಿಣಾಮವಾಗಿ ಇಂದು ಇವುಗಳೆಲ್ಲವೂ ಕಣ್ಮರೆಯಾಗಿವೆ.

ಪ್ರಸ್ತುತದಲ್ಲಿ ಕರ್ನಾಟಕದಲ್ಲಿ ಸುಮಾರು 38,000 ದೊಡ್ಡ ಮತ್ತು ಸಣ್ಣ ಕೆರೆಗಳು ಉಳಿದಿರುತ್ತವೆ. ಹಲವಾರು ಮಾಲಿನ್ಯ ಮತ್ತು ಸಂರಕ್ಷಣೆಯ ಕೊರತೆಯಿಂದಾಗಿ, ಯೋಜನಾರಹಿತ ನಾಗರೀಕರಣ ಮತ್ತು ವಿಸ್ತರಣೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಬೆದರಿಕೆಯಾಗುವ ಹಂತದಲ್ಲಿದೆ. ಇಂದು ನಾವು ಈ ಕೆರೆ, ರಾಜಕಾಲುವೆ. ಸರೋವರಗಳನ್ನು ಉಳಿಸಿ ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಯ ಆರೋಗ್ಯ, ಆರ್ಥಿಕ ಮತ್ತು ಪರಿಸರ ಭದ್ರತೆಯನ್ನು ಕಾಪಾಡಲು, ಉಳಿಸಲು ನಮ್ಮ ಪ್ರಯತ್ನವನ್ನು ಹೆಚ್ಚಿಸುವುದು ಬಹು ಮುಖ್ಯವಾಗಿದೆ.

ಈ ಕಾರ್ಯಾಗಾರವನ್ನು **ಪರಿಸರ ಬೆಂಬಲ ತಂಡ(ಇ,ಎಸ್,ಜಿ) ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ,** ಜೊತೆಗೆ **ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರದ** ಬೆಂಬಲದೊಂದಿಗೆ ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜ್ ಇವರುಗಳ ಸಹಯೋಗದೊಂದಿಗೆ ಆಯೋಜಿಸಿದ್ದು, ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಸ್ತುತ ಹಾಗೂ ಮುಂದಿನ ಪೀಳಿಗೆಗೆ ನಾವು ಕೆರೆಗಳನ್ನು ಹೇಗೆ ಉಳಿಸಬೇಕು ಮತ್ತು ನೀರಿನ ಭದ್ರತೆಯನ್ನು ಕಾಪಾಡಿಕೊಳ್ಳುವುದರ ಬಗ್ಗೆ ತಿಳಿಸಿಕೊಡಲಾಗುವುದು ಮತ್ತು ಸರಳ ಮಳೆ ನೀರು ಕೊಯ್ಲು ಪದ್ಧತಿಯನ್ನು ಮನೆಗಳಲ್ಲಿ, ವಸತಿ ಸಮುಚ್ಚಯಗಳಲ್ಲಿ, ಸರ್ಕಾರಿ ಕಟ್ಟಡಗಳಲ್ಲಿ ಹಾಗೂ ಇತರೆ ಪ್ರದೇಶಗಳಲ್ಲಿ ನಿರ್ಮಿಸಿ ಇದರಿಂದ ಶುದ್ಧ ಮಳೆ ನೀರು ಕೊಯ್ಲಿನ ಮೂಲಕ ನೀರಿನ ಭದ್ರತೆ ಮತ್ತು ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ಬಗ್ಗೆ ತಿಳಿಸಲಾಗುವುದು. ಭಾಗಾರ್ಥಿಗಳು ಈ ಕಾರ್ಯಾಗಾರದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಫ.ಕ. 817/2008 ಅರ್ಜಿಯಲ್ಲಿ (ಕರ್ನಾಟಕ ಸರ್ಕಾರ ಮತ್ತು ಇತರರ ವಿರುದ್ಧ ಪರಿಸರ ಬೆಂಬಲ ತಂಡ ಮತ್ತು ಇತರರು) ಕೆರೆಗಳ ಒತ್ತುವರಿ, ಮಾಲಿನ್ಯಗಳಿಂದ ಮತ್ತು ನಿರ್ವಹಣೆಯ ಕೊರತೆಯಿಂದ ಕೆರೆಗಳನ್ನು ಸಂರಕ್ಷಿಸುವಂತೆ, ದಿನಾಂಕ 11.ಏಪ್ರಿಲ್ 2012 ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದ ಪರಿಣಾಮಗಳ ಶ್ಲಾಘನೆಯ ನೆರವಿನ ತರುವಾಯ ಜಿಲ್ಲಾ ಕೆರೆ ಸಂರಕ್ಷಣಾ ಸಮಿತಿಯನ್ನು ಸ್ಥಾಪಿಸಿಲಾಗಿರುವುದರ ಬಗ್ಗೆ ತಿಳಿಯಪಡಿಸಲಾಗುವುದು.

ಕರ್ನಾಟಕದಲ್ಲಿ ವಾರ್ಷಿಕ ಮಳೆ ಸರಿ ಸುಮಾರು 50 ರಿಂದ 350 ಸೆಂ,ಮೀ, ಸ್ಥೂಲವಾಗಿ ಬದಲಾಗುತ್ತದೆ. ಬಿಜಾಪುರ, ರಾಯಚೂರು, ಬಳ್ಳಾರಿ ಮತ್ತು ಗುಲ್ಬರ್ಗದ ದಕ್ಷಿಣ ಭಾಗದಲ್ಲಿ ಶೇ 50 ರಿಂದ 60 ಸೆಂ,ಮೀ, ವೈವಿದ್ಯತೆ ಕಡಿಮೆ ಆಗಿದೆ. ಗಮನಾರ್ಹವಾಗಿ ರಾಜ್ಯದ ಪಶ್ಚಿಮ ಭಾಗಗಳಲ್ಲಿ ಮಳೆ ಹೆಚ್ಚಾಗುತ್ತದೆ ಮತ್ತು ಕರಾವಳಿ ಪ್ರದೇಶದ ಮೇಲೆ ಗರಿಷ್ಠ ಮಟ್ಟಕ್ಕೆ ತಲುಪುತ್ತದೆ. ಕರ್ನಾಟಕದಲ್ಲಿ ನೈರುತ್ಯ ಮುಂಗಾರು ಮಳೆಯು ಶೇ 80% ಬೀಳುವಾಗ ಮುಖ್ಯ ಮಳೆಗಾಲವಾಗಿರುತ್ತದೆ. ಚಳಿಗಾಲದಲ್ಲಿ (ಜನವರಿಯಿಂದ ಫೆಬ್ರವರಿಯವರೆಗೆ) ಮಳೆಯು ವಾರ್ಷಿಕ ಸರಾಸರಿ ಮಟ್ಟಕ್ಕಿಂತ ಶೇ 1% ಕಡಿಮೆ, ಬೇಸಿಗೆ ಕಾಲದಲ್ಲಿ (ಮಾರ್ಚಿಯಿಂದ ಮೇವರೆಗೆ) ಸುಮಾರು 7% ಮತ್ತು ನಂತರದ ಮಳೆಗಾಲದ ಪೂರ್ವದಲ್ಲಿ 12% ಕಡಿಮೆ ಇರುತ್ತದೆ.ಈಶಾನ್ಯ ಮಾನ್‌ಸೂನ್‌ನಿಂದ (ಅಕ್ಟೋಬರ್ ನಿಂದ ಡಿಸೆಂಬರ್) ಕರ್ನಾಟಕದ ದಕ್ಷಿಣ ಒಳಭಾಗದಲ್ಲಿ ತೊಂದರೆಯಾಗುತ್ತದೆ ಮತ್ತು ಈ ಪ್ರದೇಶದಲ್ಲಿ ಸರಾಸರಿ ಮಳೆಯು ಸುಮಾರು 30% ರಷ್ಟಿದೆ. ವಾರ್ಷಿಕ ಸರಾಸರಿ 500 ಸೆಂ,ಮೀ,ಗಿಂತ ಹೆಚ್ಚಾಗಿರುತ್ತದೆ. ಭಾರತದಲ್ಲಿ ಒಟ್ಟಾರೆ 14 ಭಾರಿ ಅಧಿಕ ಮಳೆ ಕೇಂದ್ರಗಳಿವೆ. ಅದರಲ್ಲಿನ 4 ಮಳೆ ಕೇಂದ್ರಗಳು ಕರ್ನಾಟಕದಲ್ಲಿ ಸ್ಥಾಪಿತವಾಗಿವೆ. ಸಾಮಾನ್ಯವಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಅಗುಂಬೆ, ಕೊಡಗು ಜಿಲ್ಲೆಯ ಮಾಕೋಟ್, ಪುಲ್ಲಿನೋಥ್, ಭಾಗಮಂಡಲ ಪ್ರದೇಶಗಳಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಸಾಮಾನ್ಯವಾಗಿ ಭಾರೀ ಮಾಳೆಯಾಗಿ ತೀವ್ರ ನೀರಿನ ಸಮಸ್ಯೆಗಳನ್ನು ಅನುಭವಿಸಿವೆ. ಇದರಿಂದ ರಾಜ್ಯಾದ್ಯಂತ ಸಾಮಾನ್ಯವಾಗಿ ನೀರಿನ ಸಮಸ್ಯೆಗಳು ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿವೆ.


ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.